**ಪಿ .ಡಬ್ಲ್ಯೂ-3**

**ದಿನಾಂಕಃ 30-05-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜೆ ಎಸ್ ಎಂ ವಕೀಲರಿಂದಃ**

ಸಾಕ್ಷಿದಾರರ ಆಧಾರ ಕಾರ್ಡ್ ನ ನೋಟರೈಸ್ ಪ್ರತಿಯನ್ನು **ನಿಪಿ-18** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ **1** ನೇ ಎದುರುದಾರರ ಪರ ಶ್ರೀ ಎಸ್ ಆರ್ ಬಿ ವಕೀಲರಿಂದಃ

ಅಪಘಾತವು 1 ನೇ ಎದುರುದಾರರ ಕಾರಿನ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ನಾನು ಕುಳಿತಿದ್ದ ದ್ವಿಚಕ್ರ ವಾಹನದ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ನನಗೆ ಸಾದಾ ಸ್ವರೂಪದ ಗಾಯಗಳಾಗಿದ್ದರೂ ಸಹಿತ ತೀವ್ರ ಸ್ವರೂಪ ಗಾಯಗಳು ಆಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಬೆನ್ನು ಮೂಳೆ, ಕಾಲಿನ ಮೂಳೆ ಮುರಿತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಚಿಕಿತ್ಸೆಗಾಗಿ ಸುಮಾರು 2 ಲಕ್ಷ ಹಣ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಪಡಿಸಿದೆ ಎನ್ನಲಾದ ಕಾರಿನ ಚಾಲಕ ಚಾಲನಾ ಪ್ರಮಾಣಪತ್ರವನ್ನು ಹೊಂದಿದ್ದರು ಎಂದರೆ ಸರಿ. ಹಾಗೆಯೇ ಸದರಿ ಕಾರಿಗೆ ಚಾಲ್ತಿ ವಿಮಾ ಪಾಲಿಸಿ ಇದೆ ಎಂದರೆ ಸರಿ. ಆದ್ದರಿಂದ ಈ ಪ್ರಕರಣದಲ್ಲಿ 2 ನೇ ಎದುರುದಾರರು ಪರಿಹಾರ ನೀಡಲು ಬಾಧ್ಯಸ್ಥರು ಎಂದರೆ ಸರಿ. 1 ನೇ ಎದುರುದಾರರು ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **2** ನೇ ಎದುರುದಾರರ ಪರ ಶ್ರೀ ಪಿ ಹೆಚ್ ಪಿ ವಕೀಲರಿಂದಃ

ನನ್ನ ಸ್ವಂತ ಊರು ಸೊರಬ ತಾಲೂಕಿನ ಗಿಣಿವಾಲ ಬಾರಂಗಿ ಎಂದರೆ ಸರಿ. ಪ್ರಸ್ತುತ ನಾನು ಚಿಕ್ಕೇರೂರು ಗ್ರಾಮದಲ್ಲಿ ವಾಸವಾಗಿರುತ್ತೇನೆ. ಅಪಘಾತವು ಶಿರಾಳಕೊಪ್ಪ ತಾಲೂಕು ವ್ಯಾಪ್ತಿಯ ಚಿಕ್ಕಮಾಗಡಿ ಗ್ರಾಮದ ಬಳಿ ಆಗಿರುತ್ತದೆ ಎಂದರೆ ಸರಿ. ಚಿಕ್ಕೇರೂರು ಗ್ರಾಮದಲ್ಲಿ ವಾಸವಾಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಅಪಘಾತ ಆದ ಕಾಲಕ್ಕೆ ನನಗೆ 16 ವರ್ಷ ವಯಸ್ಸು. ದ್ವಿಚಕ್ರ ವಾಹನದಲ್ಲಿ ನಾನು ಹಾಗೂ ನನ್ನ ದೊಡ್ಡಪ್ಪ ರಿಪ್ಪನಪೇಟೆಯಿಂದ ಗಿಣಿವಾಲ ಕಡೆಗೆ ಹೋಗುತ್ತಿದ್ದೇವು. ಸದರಿ ದ್ವಿಚಕ್ರ ವಾಹನ ನನ್ನ ದೊಡ್ಡಪ್ಪನಿಗೆ ಸೇರಿದ್ದು, ಅವರೇ ಚಲಾಯಿಸುತ್ತಿದ್ದರು.

**ಪಿ .ಡಬ್ಲ್ಯೂ-3**

2. ಅಪಘಾತ ಆದ ಹೊಂಡದ ಏರಿ ಕಿರಿದಾಗಿದೆ ಎಂದರೆ ಸರಿಯಲ್ಲ, ವಿಸ್ತಾರವಾಗಿದೆ. ಆ ದಿನ ನನ್ನ ದೊಡ್ಡಪ್ಪ ಅತಿ ವೇಗವಾಗಿ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ಚಾಲನಾ ಪರವಾನಿಗೆ ಪತ್ರವನ್ನು ಹೊಂದಿರುತ್ತಾರೆ. ಸದರಿ ದ್ವಿಚಕ್ರ ವಾಹನದ ವಿಮೆ ಚಾಲ್ತಿಯಲ್ಲಿರುತ್ತದೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ ಎಂದರೆ ಇಲ್ಲ. ಈ ಪ್ರಕರಣದ ಸಂಬಂಧ ದೂರನ್ನು ನನ್ನ ಮಾವ ಯೋಗೇಶ ದಾಖಲಿಸಿರುತ್ತಾರೆ. ನನ್ನ ಮಾವ ಶಿವಪ್ಪನ ತಪ್ಪಿನಿಂದ ಅಪಘಾತ ಆಗಿದ್ದರು ಸಹಿತ ಸುಳ್ಳು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪನು ಚಾಲನಾ ಪರವಾನಿಗೆ ಹಾಗೂ ವಾಹನದ ವಿಮೆ ಹೊಂದಿಲ್ಲದ ಕಾರಣ ಪರಿಹಾರ ಪಡೆಯುವ ಸಲುವಾಗಿ 1 ನೇ ಎದುರುದಾರರಿಗೆ ಸೇರಿದ ಕಾರು ಹಾಗೂ ಚಾಲಕನ ವಿರುದ್ಧ ಸುಳ್ಳು ದೂರು ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ.

3. ಅಪಘಾತ ಆದ ತಕ್ಷಣ ನಾನು ಚಿಕ್ಕೇರೂರಿನ ಖಾಸಗಿ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಯ ಹೆಸರು ನನಗೆ ನೆನಪಿಲ್ಲ. ಅಪಘಾತ ಆದ ಬಗ್ಗೆ ವೈದ್ಯರಿಗೆ ನಾನು ತಿಳಿಸಿಲ್ಲ. ಆಗ ಕ್ಷ-ಕಿರಣ ತಪಾಸಣೆ ಮಾಡಿಸಿರುವುದಿಲ್ಲ. ಹೆಚ್ಚಿನ ಚಿಕಿತ್ಸೆಗಾಗಿ ಶಿಕಾರಿಪುರದ ಸರ್ಕಾರಿ ಆಸ್ಪತ್ರೆಗೆ ಹೋಗಿ ನಂತರ ಅದೇ ದಿನ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಹೋಗಿರುತ್ತೇನೆ. ಶಿಕಾರಿಪುರದಲ್ಲಿ ಯಾವುದೇ ಚಿಕಿತ್ಸೆ ನೀಡದೇ ಹೆಚ್ಚಿನ ಚಿಕಿತ್ಸೆ ಗೆ ಮೆಗ್ಗಾನ ಆಸ್ಪತ್ರೆಗೆ ಕಳುಹಿಸಿದರು. 15 ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತೇನೆ. ಮೆಗ್ಗಾನ್ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ವ್ಯವಸ್ಥೆ ಇದೆ ಎಂದರೆ ಸರಿಯಲ್ಲ. ಮೆಗ್ಗಾನ ಆಸ್ಪತ್ರೆಯಲ್ಲಿ ಯಾವುದೇ ಶಸ್ತ್ರಚಿಕಿತ್ಸೆ ಆಗಿರುವುದಿಲ್ಲ. ಸಂಪೂರ್ಣ ಗುಣಮುಖ ಆದ ನಂತರ ಬಿಡುಗಡೆ ಆಗಿರುತ್ತೇನೆ ಎಂದರೆ ಸರಿ.

4. ನನಗೆ ಸಾದಾ ಸ್ವರೂಪದ ಗಾಯಗಳಾಗಿದ್ದರೂ ಸಹಿತ ತೀವ್ರ ಸ್ವರೂಪ ಗಾಯಗಳು ಆಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಬೆನ್ನು ಮೂಳೆ, ಕಾಲಿನ ಮೂಳೆ ಮುರಿತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಚಿಕಿತ್ಸೆಗಾಗಿ ಸುಮಾರು 2 ಲಕ್ಷ ಹಣ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೆಗ್ಗಾನ್ ಆಸ್ಪತ್ರೆಯಲ್ಲಿ ತೆಗೆಸಿದ ಕ್ಷ-ಕಿರಣ ಪ್ರತಿಯನ್ನು ಹಾಜರು ಪಡಿಸಲಾಗಿದೆ ಎಂದರೆ ಸರಿಯಲ್ಲ. ಅದರಲ್ಲಿ ಯಾವುದೇ ಮೂಳೆ ಮುರಿತ ಕಂಡು ಬರದ ಕಾರಣ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ -15 ರ ಅಂಗನ್ಯೂನ್ಯತೆ ಪ್ರಮಾಣಪತ್ರವನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಅಪಘಾತದ ಪೂರ್ವ ನಾನು ಹೇಗೆ ಕೆಲಸ ಮಾಡುತ್ತಿದ್ದೆ ಹಾಗೆಯೇ ಈಗಲೂ ಕೆಲಸ ನಿರ್ವಹಿಸಲು ಶಕ್ತಳಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ವಿದ್ಯಾಭ್ಯಾಸವನ್ನು ಎಂದಿನಂತೆಯೇ ಮುಂದುವರೆಸಿರುತ್ತೇನೆ ಎಂದರೆ ಸರಿ. ನಾನು ವಿದ್ಯಾರ್ಥಿ ಆಗಿರುವುದರಿಂದ ಯಾವುದೇ ಆದಾಯ ಇಲ್ಲ ಎಂದರೆ ಸರಿಯಲ್ಲ.

**ಪಿ .ಡಬ್ಲ್ಯೂ-3**

5. ನನ್ನ ದೊಡ್ಡಪ್ಪನ ತಪ್ಪಿನಿಂದ ಅಪಘಾತ ಆಗಿರುವ ಕಾರಣ 2 ನೇ ಎದುರುದಾರರು ನಾನು ಕೋರಿರುವಂತೆ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 30-05-2025.

Sd/-

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ

ಹಿರೇಕೆರೂರು